	ಪಿ.ಎಸ್.ಐ.	ಎ.ಎಸ್.ಐ.	ಹೆಚ್.ಸಿ.	ಪಿ.ಸಿ.
ಗ್ರಾಮಾಂತರ	1	2	7	21
ಟೌನ್	2	2	10	30
ನಗರ	2	4	18	54

ಆ) ರಾಷ್ಟ್ರೀಯ ಪೋಲೀಸ್ ಆಯೋಗದ ಶಿಫಾರಸ್ಸಿನ ಆಧಾರದ ಮೇಲೆ ಗ್ರಾಮೀಣ ಪಟ್ಟಣ ಮತ್ತು ನಗರ ಪೋಲೀಸ್ ಠಾಣೆಗಳಿಗೆ ತಕ್ಕಂತೆ ಏಕರೂಪದ ಸಿಬ್ಬಂದಿ ಪ್ರಮಾಣ ನಿಗದಿ ಪಡಿಸಲಾಗಿದೆ. ಇದನ್ನು ಜಾರಿಗೆ ತರಲು 610 ಪಿ. ಎಸ್. ಐ. ಗಳು, 305 ಎ.ಎಸ್.ಐ., 1830 ಹೆಚ್. ಸಿ. ಹಾಗೂ 6100 ಪಿ.ಸಿ. ಹುದ್ದೆಗಳು ಸೃಜಿಸಬೇಕಾಗುತ್ತದೆ. ಪ್ರಸ್ತಾವನೆಗೆ ಸುಮಾರು 17 ಕೋಟಿ ರೂಪಾಯಿ ವೆಚ್ಚವಾಗುತ್ತಿದೆ. ಇದನ್ನು 8 ನೇ ಯೋಜನೆಯ ಅವಧಿಯಲ್ಲಿ ಹಂತ ಹಂತವಾಗಿ ಜಾರಿಗೊಳಿಸುವ ವಿಷಯ ತೀವ್ರ ಪರಿಶೀಲನೆಯಲ್ಲಿದೆ.

ವಿಷಯ :– ಹೆಬ್ಬಾಳ ಪೋಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರ ವರ್ತನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 769 (1238)

ಶ್ರೀ ರಾಮಲಿಂಗರೆಡ್ಡಿ (ಜಯನಗರ) :– ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರಿನ ಹೊರವಲಯ ಪ್ರದೇಶದಲ್ಲಿರುವ ಹೆಬ್ಬಾಳ ಪೋಲೀಸ್ ಠಾಣೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಆರಕ್ಷಕ ಉಪ ನಿರೀಕ್ಷಕರ ವರ್ತನೆಯ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬರುತ್ತಿರುವುದು ನಿಜವೆ ?

ಆ) ಅವರು ಸದರಿ ಠಾಣೆಯ ವ್ಯಾಪ್ತಿಯಲ್ಲಿ ಬರುವ ಅನೇಕ ಕಡೆಗಳಲ್ಲಿ ಸುಮಾರು ನಿವೇಶನಗಳನ್ನು ಹಾಗೂ ಒಂದು ಭವ್ಯವಾದ ಬಂಗಲೆಯನ್ನು ಕಟ್ಟುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?...

ಇ) ಅನೇಕ ದೂರುಗಳು ಬಂದಿದ್ದು ಮೂರು ವರ್ಷಗಳಿಗೂ ಹೆಚ್ಚು ಸಮಯ ಒಂದೇ ಜಾಗದಲ್ಲಿ ಇರುವುದರಿಂದ ಸಾರ್ವಜನಿಕರ ಹಿತ ದೃಷ್ಟಿಯಿಂದ ಸ್ವಲ್ಪ ಸಮಯದವರೆಗೆ ರಾಜ್ಯದ ಬೇರೆಡೆಗೆ ವರ್ಗಾ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಗೃಹ ಸಚಿವರು) :–

ಅ) ಹೌದು.

ಆ) ಇಲ್ಲ.

ಇ) ಇವರು ಒಳ್ಳೆಯ ಕೆಲಸ ಮಾಡುತ್ತಿರುವುದರಿಂದ ಸದರಿಯವರನ್ನು ಅಲ್ಲೇ ಮುಂದುವರಿಸಲಾಗಿದೆ. ಇವರ ಬಗ್ಗೆ ಮಾಡಲಾಗಿರುವ ಆಪಾದನೆಗಳು ಸಾಬೀತಾದಲ್ಲಿ, ಇವರನ್ನು ಬದಲಾಯಿಸಲಾಗುವುದು.

ವಿಷಯ :– ನವೆಂಬರ್ ತಿಂಗಳಿನಿಂದ ಇಲ್ಲಿಯವರೆಗೆ ಅಬ್ಕಾರಿ ಬಾಬ್ತಿನಿಂದ ಸರ್ಕಾರಕ್ಕೆ ಬಂದಿರುವ ತೆರಿಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 770 (1219)

ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ) :– ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1990 ರ ನವೆಂಬರ್ ತಿಂಗಳಿನಿಂದ ಇಲ್ಲಿಯವರೆಗೆ ವಿವಿಧ ಬಾಬ್ತಿನಿಂದ ಬಂದಿರುವ ಅಬಕಾರಿ ತೆರಿಗೆ ಎಷ್ಟು ?

ಆ) ಕಳೆದ ವರ್ಷ (1989) ಇದೇ ಅವಧಿಯಲ್ಲಿ ವಿವಿಧ ಬಾಬ್ತಿನಿಂದ ಬಂದಿದ್ದ ಅಬಕಾರಿ ತೆರಿಗೆ ಎಷ್ಟು?

ಇ) ರಾಜ್ಯದಲ್ಲಿ ಮದ್ಯ ಮಾರಾಟದಲ್ಲಿ ಸೆಕೆಂಡ್ಸ್, ಹಾವಳಿ ಪ್ರಾರಂಭವಾಗಿದೆಯೇ ?

ಈ) ಹಾಗಿದ್ದಲ್ಲಿ ಅದನ್ನು ತಡೆಗಟ್ಟಲು ಸರ್ಕಾರದ ಮುಂದೆ ಇರುವ ಕ್ರಮಗಳೇನು ?

ಶ್ರೀ ಕೆ. ಶಿವಮೂರ್ತಿ (ಅಬಕಾರಿ ರಾಜ್ಯ ಸಚಿವರು) :–